## 2017 ಕ.ತೀ.ವ 20

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

ಶಿವಾನಂದ್ ಬಿ. ನಾಗೂರು ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿಗಳ ಸಲ್ಲಿಕೆ.

ಕರ್ನಾಟಕ ಶಿಕ್ಷಣ ಇಲಾಖೆ (ಸಾರ್ವಜನಿಕ ಶಿಕ್ಷಣ ಇಲಾಖೆ) ಸೇವೆಗಳು (ತಿದ್ದುಪಡಿ) ನಿಯಮಗಳು, 2002 ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್, ಸೌತ್ ಇಂಡಿಯಾ ಇದರಿಂದ ಇಂಗ್ಲಿಷ್‌ನಲ್ಲಿ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದ ಶಿಕ್ಷಕರು ಅರ್ಜಿದಾರರೊಂದಿಗೆ ಸರಿಸಮವಾಗಿ ಪರಿಗಣಿಸಬೇಕೆಂದು ಕೋರಿರುತ್ತಾರೆ – ನ್ಯಾಯಾಧಿಕರಣದ ಮುಂದೆ 2002ರ ನಿಯಮಗಳನ್ನು ಪ್ರಶ್ನಿಸಿರುತ್ತಾರೆ. ಅರ್ಜಿಗಳ ವಜಾ ಇದರ ವಿರುದ್ಧದ ವಾದ – 2002ರ ಪ್ರಶ್ನಿತ ನಿಯಮಗಳ ಮೂಲಕ, ಪ್ರತ್ಯರ್ಜಿದಾರ/ರಾಜ್ಯವು, ಏಕಪಕ್ಷೀಯವಾಗಿ, ಭಾಷಾ ಸಹ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳಬೇಕಾದ ಶಿಕ್ಷಕರ ಮಟ್ಟಗಿನ ವಿದ್ಯಾರ್ಹತೆಯನ್ನು ದುರ್ಬಲಗೊಳಿಸಿರುತ್ತದೆ. ಭಾಷಾ ಸಹಶಿಕ್ಷಕರಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿದ ವಿದ್ಯಾರ್ಹತೆಯು, ಐಚ್ಛಿಕ ವಿಷಯಗಳಲ್ಲಿ ಒಂದಾಗಿರುವಂತೆ ಸಂಬಂಧಪಟ್ಟ ಭಾಷೆಯೊಂದಿಗಿನ ಕಲಾ ವಿಭಾಗದ ಪದವಿಯಾಗಿರಬೇಕು. ಪ್ರಶ್ನಿತ ನಿಯಮಗಳಡಿಯಲ್ಲಿ, ಆರ್‌ಐಇಎಸ್‌ಐಯಿಂದ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆಯುವಂಥ ಅಭ್ಯರ್ಥಿಯು ಪರಿಗಣನೆಗಾಗಿ ಅರ್ಹನಾಗಿರತಕ್ಕವನಾಗಿರುತ್ತಾನೆ. ಪ್ರಶ್ನಿತ ನಿಯಮಗಳು,

*ರಿಟ್ ಅರ್ಜಿ ಸಂ. 2772/2011 ಮತ್ತು ಇತರೆ, ದಿನಾಂಕ: 30ನೇ ಜುಲೈ, 2015.

2002ರಲ್ಲಿ ಉಪಬಂಧಿಸಿರುವ ಸಡಿಲಿಕೆಯು, ಎನ್‌ಸಿಟಿಇ ಯಿಂದ ಗೊತ್ತುಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಗೆ ವಿರುದ್ಧವಾಗಿ ಸಾಗುತ್ತದೆಂದು ಅಭಿಪ್ರಾಯ ಪಡಲಾಗಿದೆ.

ಮುಂದುವರೆದು,

(ಎ) ಶಿಕ್ಷಕರನ್ನು ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ನೇಮಕ ಮಾಡಿಕೊಳ್ಳಬೇಕೆಂದು ಕೋರಲಾಗಿರುತ್ತದೆ. ಪ್ರಶ್ನಿತ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರವು, ಪ್ರಸ್ತುತ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರವು, ಪ್ರಸ್ತುತ ಪ್ರಕರಣದಲ್ಲಿ ಸಂಬಂಧಪಟ್ಟ ಭಾಷೆಯನ್ನು ಅಂದರೆ ಇಂಗ್ಲಿಷ್ ಭಾಷೆಯನ್ನು ಪದವಿ ಮಟ್ಟದಲ್ಲಿ ಒಂದು ಐಚ್ಛಿಕ ಭಾಷೆಯನ್ನಾಗಿ ಅಧ್ಯಯನ ಮಾಡಿರದಂಥ ಅಭ್ಯರ್ಥಿಗಳಿಗೆ ಬಡ್ತಿ ನೀಡುವುದಕ್ಕೆ ಷರತ್ತನ್ನು ಏಕಪಕ್ಷೀಯವಾಗಿ ಸಡಿಲಗೊಳಿಸಿರುತ್ತದೆ. ಇದರ ಅರ್ಥ, ಅವರ ಪದವಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಅಭ್ಯಸಿಸದ ಪದವಿಧರರು ಮತ್ತು ಆರ್‌ಐಇಎಸ್‌ಐ ಯಿಂದ ಡಿಪ್ಲೊಮೊ ಪಡೆದಿರುವವರನ್ನು ಇಂಗ್ಲಿಷ್ ಬೋಧಿಸಲು ಇಂಗ್ಲಿಷ್ ಸಹಶಿಕ್ಷಕನಾಗಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

(ಬಿ)ಎನ್‌ಸಿಟಿಇ ಯು, ಶಿಕ್ಷಕರಿಗೆ ಸಂಬಂಧಿಸಿದಂತೆ ಕನಿಷ್ಠ ವಿದ್ಯಾರ್ಹತೆಯನ್ನು ಗೊತ್ತುಪಡಿಸಲು ಇರುವ ಸಕ್ಷಮ ಪ್ರಾಧಿಕಾರವಾಗಿರುತ್ತದೆ. 2001ರ ವಿನಿಯಮನಗಳ ಮೂಲಕ, ಸೆಕೆಂಡರಿ / ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಎನ್‌ಸಿಟಿಇಯು ನಿಗದಿಪಡಿಸಿದ ವಿದ್ಯಾರ್ಹತೆಯು ಬಿ.ಎಡ್ ಪದವಿ ಅಥವಾ ಅದರ ತತ್ಸಮಾನ ಪದವಿಯ ಪದವೀದರನಾಗಿರಬೇಕೆಂಬುದಾಗಿರುತ್ತದೆ. 2001ರ ವಿನಿಯಮನಗಳ 5ನೇ ವಿನಿಯಮನವು ಯಾವುದೇ ಷರತ್ತುಗಳನ್ನು ಸಡಿಲಿಕೆ ಮಾಡುವುದಕ್ಕೆ ಅಧಿಕಾರವನ್ನು ನೀಡುತ್ತದೆ.

(ಸಿ)ರಾಜ್ಯ ಸರ್ಕಾರವು ಉದ್ಯೋಗದಾತನಾಗಿ, ಎನ್‌ಸಿಟಿಇಯು ಗೊತ್ತುಪಡಿಸಿರುವ ವಿದ್ಯಾರ್ಹತೆಯನ್ನು ದುರ್ಬಲಗೊಳಿಸಲು ಅಪೇಕ್ಷಿಸಿದಲ್ಲಿ, 2001ರ ವಿನಿಯಮಗಳ 5ನೇ ವಿನಿಯಮನವನ್ನು ಆಧಾರವಾಗಿಟ್ಟುಕೊಂಡು ಸಡಿಲಿಕೆ ಕೋರುವುದನ್ನು ಮಾಡಲೇ

**ಬೇಕಾಗುತ್ತದೆ. ಎನ್‌ಸಿಟಿಇ ಯಿಂದ ಯಾವುದೇ ಸಡಿಲಿಕೆಯನ್ನು ಪಡೆದಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಅಧಿಸೂಚನೆಯು ಮುಖ್ಯವಾಗಿರುತ್ತದೆ.**

**(ಡಿ)ನ್ಯಾಯಾಧಿಕರಣವು, ವಿಷಯವನ್ನು ಈ ಆಯಾಮದೊಂದಿಗೆ ವ್ಯವಹರಿಸುವಾಗ, ಕನಿಷ್ಠ ವಿದ್ಯಾರ್ಹತೆಗಳನ್ನು ವಿಧಿಸುವಂಥ ಎನ್‌ಸಿಟಿಇ ವಿನಿಯಮನಗಳೂ ಕೂಡ ಸಮಾನ ವಿದ್ಯಾರ್ಹತೆಯನ್ನು ನಿಗದಿಪಡಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಸ್ವಾತಂತ್ರವನ್ನು ನೀಡುತ್ತವೆಂದು ಹಾಗೂ ಪ್ರಶ್ನಿತ ತಿದ್ದುಪಡಿಯು, ಎನ್‌ಸಿಟಿಇ ವಿನಿಯಮನಗಳಡಿಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಗಳನ್ನು ಮಾರ್ಪಾಡು ಮಾಡುವಂತಿಲ್ಲವೆಂದು ಸ್ವತಃ ಅಭಿಪ್ರಾಯ ಪಡುವ ಮೂಲಕ ತಪ್ಪು ನಿರ್ದೇಶನ ಮಾಡಿರುತ್ತದೆ. ನ್ಯಾಯಾಧಿಕರಣದ ಈ ತೀರ್ಪು ವ್ಯತಿರಿಕ್ತವಾಗಿರುತ್ತದೆ.**

**ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2011) 4 ಎಸ್‌ಸಿಸಿ 798*
*ರನು ಹಜಾರಿಕ ಮತ್ತು ಇತರರು –ವಿರುದ್ಧ–*
*ಅಸ್ಸಾಂ ರಾಜ್ಯ ಮತ್ತು ಇತರರು* *(ಉಲ್ಲೇ) 11*

ಅರ್ಜಿದಾರರ ಪರ: ಶ್ರೀ ಸಂತೋಷ ಬಿ ಮಾಲಗೌಡರ್, ವಕೀಲರು.
1 ರಿಂದ 5ರವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀಮತಿ ವೀಣಾ ಹೆಗಡೆ, ಹೆಚ್‌ಸಿಜಿಪಿ
6 ಮತ್ತು 7ನೇ ಪ್ರತ್ಯರ್ಜಿದಾರರ ಪರ: ಶ್ರೀ ಕಡದಕಟ್ಟಿ, ವಕೀಲರು,
6 ರಿಂದ 8ರವರೆಗಿನ ಸಿಆರ್ ಪ್ರತ್ಯರ್ಜಿದಾರರು (ಗೈರುಹಾಜರಿ) : ಶ್ರೀ ಎಸ್.ಜಿ. ಪಂಡಿತ್ ಮತ್ತು ಶ್ರೀ ಕೆ.ಟಿ. ಗರಡಿಮನಿ, ವಕೀಲರು;
9 ರಿಂದ 11ರವರೆಗಿನ ಪ್ರತ್ಯರ್ಜಿದಾರರಿಗೆ : ಜಾರಿ ಮಾಡಲಾಗಿದೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್** :

ಅರ್ಜಿದಾರರು, ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣದ (ಇನ್ನು ಮುಂದೆ ಸಂಕ್ಷಿಪ್ತವಾಗಿ ನ್ಯಾಯಾಧಿಕರಣ ಎಂದು ಉಲ್ಲೇಖಿಸಲಾಗಿರುತ್ತದೆ.) ಮುಂದೆ ಯಶಸ್ಸನ್ನು ಪಡೆಯದ ಅರ್ಜಿದಾರರಾಗಿದ್ದು, ಅರ್ಜಿಗಳ ಸಂಖ್ಯೆ 1437 ರಿಂದ 1442/2010ರ ಅವರ ಅರ್ಜಿಗಳನ್ನು ವಜಾ ಮಾಡಿ 03.12.2010ನೇ ದಿನಾಂಕದಂದು ನ್ಯಾಯಾಧಿಕರಣವು ನೀಡಿರುವ ಆದೇಶವನ್ನು ಪ್ರಶ್ನಿಸಿರುತ್ತಾರೆ.

ಅರ್ಜಿದಾರರು ಪ್ರಾಥಮಿಕ ಶಾಲಾ ಸಹ ಶಿಕ್ಷಕರುಗಳಾಗಿ ಬೇರೆ ಬೇರೆ ದಿನಾಂಕಗಳಲ್ಲಿ ಸೇವೆಗೆ ಸೇರಿದ್ದು, ಬೇರೆ ಬೇರೆ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ ಹಾಗೂ ಅವರು ಶಿಕ್ಷಕರುಗಳಿಗೆ ಸಂಬಂಧಿಸಿದ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡಿರುವ ದಿನಾಂಕ 24.06.2003ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 59 ಎಸ್ಆರ್ಇ 2002, ಬೆಂಗಳೂರು ಇದರಿಂದ ಬಾಧಿತರಾಗಿದ್ದೇವೆಂಬ ತಮ್ಮ ಒಂದೇ ಅಹವಾಲನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಬಿ.ಎ. ಪದವಿ (ಕಲಾ ವಿಭಾಗದ ಪದವಿ) ಹಾಗೂ ಬಿ.ಎಡ್., ಪದವಿಗಳನ್ನು ಪಡೆದುಕೊಂಡು ಬಿ.ಎ. ಮತ್ತು ಬಿ.ಎಡ್., ಎರಡೂ ಹಂತದ ಪದವಿಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಒಂದು ಐಚ್ಛಿಕ ವಿಷಯವಾಗಿ ಓದಿರುತ್ತಾರೆ. ಅವರುಗಳು ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿನ ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್–II ಹುದ್ದೆಯ ಬಡ್ತಿಗೆ ಅರ್ಹರಾಗಿರುತ್ತಾರೆ. ಪ್ರತ್ಯರ್ಜಿದಾರ ಸಂ.5 ಧಾರವಾಡ ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಕಾರ್ಯ ನಿರ್ವಹಿಸರುತ್ತಿರುವ ಶಿಕ್ಷಕರ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿರುತ್ತಾರೆ. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ, ಪದವಿ ಮಟ್ಟದಲ್ಲಿ ಇಂಗ್ಲೀಷ್ ಭಾಷೆಯನ್ನು ಒಂದು ಐಚ್ಛಿಕ ವಿಷಯವಾಗಿ ಓದಿರುವುದಕ್ಕಾಗಿ ಡಿಪ್ಲೊಮೊ ಪ್ರಮಾಣಪತ್ರವನ್ನು ಸಲ್ಲಿಸಿರುವಂಥ ಪ್ರಾಥಮಿಕ ಶಾಲಾ ಶಿಕ್ಷಕರಗಳನ್ನೂ ಸಹ ಸೇರಿಸಿರುತ್ತಾರೆ. ಅರ್ಜಿದಾರರು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಆಕ್ಷೇಪಿಸಿ, ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಪ್ರತ್ಯರ್ಜಿದಾರ ಸಂ.5 ರವರು ತಮ್ಮ ತಪ್ಪನ್ನು

ಮನವರಿಕೆ ಮಾಡಿಕೊಂಡು ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರಗಳನ್ನು ಪಡೆದುಕೊಂಡಿದ್ದಂಥ ಅಭ್ಯರ್ಥಿಗಳ ಹೆಸರನ್ನು ಬಿಟ್ಟು, ಸದರಿ ಪಟ್ಟಿಯನ್ನು ಸರಿಪಡಿಸಲು ಕೋರಿರುತ್ತಾರೆ. ಅದರ ಅನುಸರಣೆಯಲ್ಲಿ, ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು 03.02.2010ರಂದು ಸಿದ್ಧಪಡಿಸಿ, 5ನೇ ಪ್ರತ್ಯರ್ಜಿದಾರರು, ಪ್ರೌಢಶಾಲಾ ಸಹ ಶಿಕ್ಷಕ ದರ್ಜೆ–II ರ ಹುದ್ದೆಯ ಬಡ್ತಿಗಾಗಿ ಅರ್ಜಿದಾರರ ಪ್ರಕರಣಗಳನ್ನು ಪರಿಗಣಿಸಲು 08.02.2010ರಂದು ಕೌನ್ಸಿಲಿಂಗ್‌ಗೆ ಸಂಬಂಧಿಸಿದಂತೆ ದಿನಾಂಕಗಳನ್ನು ನಿಗದಿಪಡಿಸಿರುತ್ತದೆ. ಆದಾಗ್ಯೂ, ಸದರಿ ಕೌನ್ಸಿಲಿಂಗ್ ರದ್ದಾಗಿರುತ್ತದೆ. ವಿಚಾರಿಸಲಾಗಿ, ಪ್ರತ್ಯರ್ಜಿದಾರರ ಸಂಖ್ಯೆ 5 ರವರು, ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2002 (ಇನ್ನು ಮುಂದೆ ಸಂಕ್ಷಿಪ್ತವಾಗಿ 2002ರ ನಿಯಮಗಳೆಂದು ಉಲ್ಲೇಖಿಸಲಾಗಿದೆ) ರ ಮೇರೆಗೆ, ಐಚ್ಛಿಕ ವಿಷಯವಾಗಿ ಇಂಗ್ಲೀಷ್ ಭಾಷೆಯನ್ನು ಓದಿರುವಂಥ ಅಥವಾ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್, ದಕ್ಷಿಣ ಭಾರತ (ಇನ್ನು ಮುಂದೆ ಸಂಕ್ಷಿಪ್ತವಾಗಿ 'ಆರ್‌ಐಇಎಸ್‌ಐ' ಎಂದು ಉಲ್ಲೇಖಿಸಲಾಗಿರುತ್ತದೆ) ಇಲ್ಲಿ ಆಂಗ್ಲ ಭಾಷೆಯಲ್ಲಿ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದಿರುವಂಥ ಅಭ್ಯರ್ಥಿಗಳನ್ನು, ಪ್ರೌಢಶಾಲಾ ಸಹ ಶಿಕ್ಷಕ ಗ್ರೇಡ್–IIರ ಹುದ್ದೆಯ ನೇಮಕಾತಿ ಮತ್ತು ಮುಂಬಡ್ತಿಗೆ ಪರಿಗಣಿಸಬಹುದೆಂದು ಹೇಳಿ 9.2.2010ರ ಆದೇಶವನ್ನು ಹೊರಡಿಸಿರುತ್ತಾರೆಂಬುದು ಅರ್ಜಿದಾರರಿಗೆ ತಿಳಿದುಬಂದಿರುತ್ತದೆ. ಹಾಗಾಗಿ ತಿದ್ದುಪಡಿ ನಿಯಮಗಳು, 2002ರ ನಿರೂಪಣೆಯಲ್ಲಿ, ಆರ್.ಐ.ಇ.ಎಸ್.ಐ. ಯಿಂದ ಇಂಗ್ಲಿಷ್‌ನಲ್ಲಿ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದಿರುವಂಥ ಶಿಕ್ಷಕರು ಅರ್ಜಿದಾರರೊಂದಿಗೆ ಸಮಾನವಾಗಿ ಪರಿಗಣಿಸಬೇಕೆಂದು ಕೋರಿಕೆಯನ್ನು ಮಂಡಿಸಿರುತ್ತಾರೆ. ಅರ್ಜಿದಾರರು, ಸದರಿ ನಿಯಮಗಳನ್ನು ಹಲವಾರು ಆಧಾರಗಳ ಮೇಲೆ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಿದ್ದರು. ನ್ಯಾಯಾಧಿಕರಣವು, ಪ್ರಶ್ನಿತ ಆದೇಶದ ಮೂಲಕ, ಅವರ ಅರ್ಜಿಗಳನ್ನು ವಜಾ ಗೊಳಿಸಿರುತ್ತದೆ. ಹಾಗಾಗಿ ಈ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ.

3. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಸಂತೋಷ್ ಬಿ. ಮಾಲಗೌಡರ್, ಪ್ರತ್ಯರ್ಜಿದಾರ 1 ರಿಂದ 5 ಇದರ ಪರ ಹಾಜರಾದ ಮಾನ್ಯ

ಹೆಚ್.ಸಿ.ಜಿ.ಪಿ. ಶ್ರೀಮತಿ ವೀಣಾ ಹೆಗಡೆ ಮತ್ತು ಪ್ರತ್ಯರ್ಜಿದಾರ–6 ಮತ್ತು 7ರ ಪರ ಹಾಜರಾದ ಮಾನ್ಯ ಶ್ರೀ ಎಸ್.ಜಿ. ಕಡದಕಟ್ಟಿ, ವಕೀಲರುಗಳ ವಾದವನ್ನು ನಾವು ಆಲಿಸಿರುತ್ತೇವೆ.

4. ಶಿಕ್ಷಕರಂತೆ ನೇಮಕ ಮಾಡಿಕೊಳ್ಳಲು ಅಭ್ಯರ್ಥಿಗಳಿಗೆ ಸಂಬಂಧಿಸಿದ ವಿದ್ಯಾರ್ಹತೆಯನ್ನು ಕಾಲಕಾಲಕ್ಕೆ ಅಧಿಸೂಚನೆ ಹೊರಡಿಸುವ ಮೂಲಕ ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದ ರಾಷ್ಟ್ರೀಯ ಪರಿಷತ್ತು (ಇನ್ನೂ ಸಂಕ್ಷಿಪ್ತವಾಗಿ 'ಎನ್‌ಸಿಟಿಇ' ಎಂದು ಉಲ್ಲೇಖಿಸಲಾಗಿರುತ್ತದೆ) ನಿಗದಿಪಡಿಸುತ್ತದೆಂದು ಅರ್ಜಿದಾರರ ಪರ ಮಾನ್ಯ ವಕೀಲರು ನಿವೇದಿಸಿಕೊಂಡಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಅನ್ವಯವಾಗುವ ನಿಬಂಧನೆಗಳನ್ನು 03.09.2001ರಂದು ಎನ್‌ಸಿಟಿಇ ಮೂಲಕ ಅಧಿಸೂಚಿಸಲಾಗಿರುತ್ತದೆಂದು ಮತ್ತು ಇದರಡಿಯಲ್ಲಿ, ಸೆಕೆಂಡರಿ/ಪ್ರೌಢಶಾಲೆಗೆ ಸಂಬಂಧಿಸಿದ ವಿದ್ಯಾರ್ಹತೆಯನ್ನು ಬ್ಯಾಚುಲರ್ ಆಫ್ ಎಜ್ಯೂಕೇಷನ್ ಅಥವಾ ಇದರ ತತ್ಸಮಾನ ಪದವಿಯಂತೆ ನಿಗದಿಪಡಿಸಲಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಎಲಿಮೆಂಟರಿ, ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಮಟ್ಟಗಳಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ಸ್ಥಾಪಿಸಿ ನಡೆಸುತ್ತಿರುವ ಅಥವಾ ನೆರವು ನೀಡುತ್ತಿರುವ ಎಲ್ಲಾ ಔಪಚಾರಿಕ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಸದರಿ ನಿಬಂಧನೆಗಳು ಅನ್ವಯವಾಗುತ್ತವೆಂದು ಇವರು ನಿವೇದಿಸಿರುತ್ತಾರೆ. ಇವರು, ವಿದ್ಯಾರ್ಹತೆಗಳಲ್ಲಿ ಸಡಿಲಿಕೆ ನೀಡಲು ಅಧಿಕಾರದೊಂದಿಗೆ ವ್ಯವಹರಿಸುವಂಥ ಸದರಿ ನಿಬಂಧನೆಗಳ ಖಂಡ ಸಂಖ್ಯೆ 5 ರ ಕಡೆಗೆ ನಮ್ಮ ಗಮನವನ್ನು ಸೆಳೆದಿರುತ್ತಾರೆ.

5. 'ಎನ್‌ಸಿಟಿಇ' ಯು, ಸಂಬಂಧಪಟ್ಟ ರಾಜ್ಯ ಸರ್ಕಾರದಿಂದ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ, ಈಗಿರುವ ವಿಶೇಷ ಸಂದರ್ಭಗಳು ಸ್ವಲ್ಪ ಸಮಯಕ್ಕಾಗಿ, ನಿಬಂಧನೆಗಳ ಕೆಲವು ಉಪಬಂಧಗಳ ಅಂಥ ಸಡಿಲಿಕೆಗೆ ವಾರೆಂಟು ನೀಡಿರುವುದು ಮನವರಿಕೆಯಾದಲ್ಲಿ, ಆ ಮಟ್ಟಿಗೆ ಅಂಥ ಉಪಬಂಧದ ಸಡಿಲಿಕೆಯನ್ನು ನೀಡಬಹುದು ಮತ್ತು ಅದು ಅವಶ್ಯಕವೆಂದು ಪರಿಗಣಿಸಬಹುದಾದಂಥ ನಿಬಂಧನೆಗಳಿಗೆ ಒಳಪಟ್ಟಿರಬಹುದು. ಇವರು ಪ್ರಶ್ನಿತ ನಿಯಮಗಳು, ರಾಜ್ಯ ಸರ್ಕಾರವು ಶಿಕ್ಷಕರ

ಬಡ್ತಿ ಮತ್ತು ನೇರ ನೇಮಕಾತಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡಬಹುದೆಂದು ನಿವೇದಿಸಿಕೊಂಡಿರುತ್ತಾರೆ. ಇವರು ತಿದ್ದುಪಡಿ ನಿಯಮಗಳ 4ನೇ ನಿಯಮದ ಕಡೆಗೆ ನಮ್ಮ ಗಮನ ಸೆಳೆದಿರುತ್ತಾರೆ ಮತ್ತು ಅದು ಈ ಮುಂದಿನಂತಿರುತ್ತದೆ.

> *"ಈಗಿರುವ ನೇಮಕಾತಿ ನಿಯಮಗಳನ್ನು, ಅನುಸೂಚಿಯಲ್ಲಿ ಗೊತ್ತುಪಡಿಸಿದ ವಿದ್ಯಾರ್ಹತೆಗಳೊಂದಿಗಿನ ದೃಢತೆಯಲ್ಲಿ ಅವುಗಳನ್ನು ತರುವ ಮಟ್ಟಿಗೆ ಮೂರು ವರ್ಷಗಳ ಅವಧಿಯೊಳಗೆ ಮಾರ್ಪಾಡು ಗೊಳಿಸಬಹುದು. ಅದೇ ಸಮಯದಲ್ಲಿ, ಈಗಿರುವ ನೇಮಕಾತಿ ವಿದ್ಯಾರ್ಹತೆಗಳ ಪ್ರಕಾರ ನೇಮಕ ಮಾಡಿಕೊಂಡ ಶಿಕ್ಷಕರನ್ನು, ಈ ನಿಬಂಧನೆಗಳನ್ನು ಹೊರಡಿಸಿದ ತರುವಾಯ, ಅನುಸೂಚಿಯಲ್ಲಿ ಗೊತ್ತುಪಡಿಸಿದಂಥ ವಿದ್ಯಾರ್ಹತೆಗಳನ್ನು ಪಡೆದುಕೊಳ್ಳಲು ಅಗತ್ಯಪಡಿಸಲಾಗುವುದು".*

ಮತ್ತು ಈ ತಿದ್ದುಪಡಿಯು, 'ಎನ್‌ಸಿಟಿಇ' ನಿಬಂಧನೆಗಳಿಗೆ ವಿರುದ್ಧವಾಗಿ ಸಾಗಿದಾಗ್ಯೂ, ಇಂಗ್ಲೀಷ್ ಭಾಷೆಯ ಸಹ ಶಿಕ್ಷಕನಾಗಿ ನೇಮಕ ಮಾಡಿಕೊಂಡು ಮುಂಬಡ್ತಿ ಪಡೆಯುವುದಕ್ಕೆ ಸಂಬಂಧಿಸಿದಂಥ ಪರಿಗಣನೆಗಾಗಿ ಡಿಪ್ಲೊಮೊ ಪ್ರಮಾಣ ಪತ್ರವನ್ನು ಪಡೆದಿರುವ ಅಭ್ಯರ್ಥಿಗಳನ್ನು ಅರ್ಹರನ್ನಾಗಿಸಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಸುನಾವಣೆಯ ಸಮಯದಲ್ಲಿ, ಪ್ರಾದೇಶಿಕ ಆಂಗ್ಲ ಭಾಷಾ ಸಂಸ್ಥೆ, ದಕ್ಷಿಣ ಭಾರತ ಇದರ ಮಾಹಿತಿ ಅಧಿಕಾರಿಯವರು 10.06.2011 ಮತ್ತು 21.04.2011 ದಿನಾಂಕಗಳಂದಿನ ಎರಡು ಪತ್ರಗಳನ್ನು ದಾಖಲಿಸಿರುತ್ತಾರೆ. 10.06.2011ರ ಪತ್ರದಲ್ಲಿ, 'ಎನ್‌ಸಿಟಿಇ' ಯು 'ಇಂಗ್ಲಿಷ್ ಭಾಷಾ ಬೋಧನೆಯಲ್ಲಿ ಸ್ನಾತಕೋತ್ತರ ಡಿಪ್ಲೊಮೊ' ಶೀರ್ಷಿಕೆಯ ಒಂದು ವರ್ಷದ ದೂರ ಶಿಕ್ಷಣ ಮಾದರಿಯ ಕಾರ್ಯಕ್ರಮವನ್ನು ಆಯೋಜಿಸಿರುತ್ತದೆಂದು ಹೇಳಲಾಗಿರುತ್ತದೆ. ಮುಂದುವರೆದು, ಮಾನ್ಯ ವಕೀಲರು, ಆರ್‌ಐಇಎಸ್‌ಐ ಸ್ವತಃ ಒಪ್ಪಿಕೊಂಡಂತೆ, ಇಂಗ್ಲಿಷ್ ಭಾಷೆಯಲ್ಲಿ ಡಿಪ್ಲೊಮೊ ಪ್ರಮಾಣಪತ್ರವೆಂದು ಕರೆಯುವ ಯಾವುದೇ ಪ್ರಮಾಣಪತ್ರವು ಇರುವುದಿಲ್ಲವೆಂದು ಹೇಳಲಾಗಿರುತ್ತದೆ. 21.04.2011ನೇ ದಿನಾಂಕದ ಪತ್ರವನ್ನು

ಪ್ರಸ್ತಾವಿಸಿ, ಎರಡು ನಿರ್ದಿಷ್ಟ ವಿಚಾರಗಳು ಅಂದರೆ, ಇಂಗ್ಲಿಷ್‌ನಲ್ಲಿನ ಸ್ನಾತಕೋತ್ತರ ಡಿಪ್ಲೊಮೊವು ವಿಶ್ವವಿದ್ಯಾಲಯವು ನೀಡುವ ಪದವಿಗೆ ಸಮಾನವಾದುದೆ ಮತ್ತು ಇಂಗ್ಲಿಷ್ ನಲ್ಲಿನ ಸ್ನಾತಕೋತ್ತರ ಡಿಪ್ಲೊಮೊವು ಬಿ.ಎಡ್.,ಗೆ ಸಮಾನವಾದುದೇ ಎಂದು ಆರ್.ಟಿ.ಐ. ಅರ್ಜಿಯಲ್ಲಿ ಪ್ರಸ್ತಾವಿಸಲಾಗಿರುತ್ತದೆಂದು ಮತ್ತು ಆರ್‌ಐಇಎಸ್‌ಐ ಯು, ಸದರಿ ವಿಚಾರಗಳಿಗೆ ನಕಾರಾತ್ಮಕವಾಗಿ ಉತ್ತರಿಸಿದೆಯೆಂದೂ, ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಇವರು, ಇಂಗ್ಲಿಷ್ ಭಾಷೆಯ ಸಹ ಶಿಕ್ಷಕನಾಗಿ ನೇಮಕ ಮಾಡಿಕೊಳ್ಳುವ ಅಥವಾ ಬಡ್ತಿ ನೀಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ನಿಯಮಗಳನ್ನು ತಿದ್ದುಪಡಿ ಮಾಡುವ ಪ್ರಶ್ನಿತ ಅಧಿಸೂಚನೆಯು ಆರಂಭದಿಂದಲೇ ಶೂನ್ಯವಾಗತಕ್ಕದ್ದು ಮತ್ತು ರದ್ದುಪಡಿಸುವುದಕ್ಕೆ ಯುಕ್ತವಾಗಿರತಕ್ಕದ್ದು. 03.12.2010ರ ನ್ಯಾಯಾಧಿಕರಣದ ತೀರ್ಪನ್ನು ನಿರಾಕರಿಸಿ, ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಸ್ವತಃ ತಪ್ಪು ದಾರಿಗೆಳೆದಿರುತ್ತದೆ ಮತ್ತು ಅರ್ಜಿದಾರರು, ವಿದ್ಯಾರ್ಹತೆಯನ್ನು ನಿಗದಿಪಡಿಸುವಲ್ಲಿ ಸಂವಿಧಾನದ ಅಥವಾ ಯಾವುದೇ ಶಾಸನಾತ್ಮಕ ಉಪಬಂಧದ ಉಲ್ಲಂಘನೆಯಾಗಿದೆ ಎಂದು ರುಜುವಾತುಪಡಿಸಲು ಅಸಮರ್ಥರಾಗಿದ್ದಾರೆಂಬ ಆಧಾರದ ಮೇಲೆ ಅವರ ಅರ್ಜಿಗಳನ್ನು ವಜಾ ಮಾಡಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಆದ್ದರಿಂದ, ಈ ಅರ್ಜಿಗಳನ್ನು ಅಂಗೀಕರಿಸಬೇಕೆಂದು ಇವರು ಕೋರಿರುತ್ತಾರೆ.

6. ಅದಕ್ಕೆ ವಿರುದ್ಧವಾಗಿ, ಮಾನ್ಯ ಹೆಚ್.ಸಿ.ಜಿ.ಪಿಯವರು, ತಿದ್ದುಪಡಿಯು, ಬೇರೆ ಬೇರೆ ಶಿಸ್ತುಗಳಲ್ಲಿ ಪದವಿ ಪಡೆದಿರುವಂಥ ಅಭ್ಯರ್ಥಿಗಳಿಗೆ ಸೌಲಭ್ಯ ಕಲ್ಪಿಸಲು ಮಾಡಲಾಗಿದೆಯೆಂದು ವಾದಿಸಿ, ನ್ಯಾಯಾಧಿಕರಣವು ಹೊರಡಿಸಿರುವ ಆದೇಶವನ್ನು ಬೆಂಬಲಿಸಿರುತ್ತಾರೆ. ಆಕೆ, ಆರ್‌ಐಇಎಸ್‌ಐ ಯಿಂದ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದು, ಇಂಗ್ಲೀಷ್ ಭಾಷೆಯ ಸಹ ಶಿಕ್ಷಕ ಹುದ್ದೆಗೆ ನೇಮಕವಾಗುವುದಕ್ಕೆ ಅಥವಾ ಬಡ್ತಿ ಹೊಂದುವುದಕ್ಕೆ ಪರಿಗಣಿಸಬೇಕೆಂದು, ಸ್ವತಃ ಅರ್ಹರಾದಂಥ ಅಭ್ಯರ್ಥಿಗಳಿಗೆ ಸಂಬಂಧಿಸಿದಂಥ ಪೂರ್ವ ಷರತ್ತಾಗಿರುತ್ತದೆ. ಉದ್ಯೋಗದಾತನಾಗಿರುವ ರಾಜ್ಯ ಸರ್ಕಾರವು, ವಿದ್ಯಾರ್ಹತೆಯನ್ನು ಗೊತ್ತುಪಡಿಸುವ ಹಕ್ಕನ್ನು ಹೊಂದಿರುತ್ತದೆ ಮತ್ತು ಪ್ರಶ್ನಿತ ಅಧಿಸೂಚನೆಯನ್ನು ಹೊರಡಿಸುವಲ್ಲಿ

ಯಾವುದೇ ತಪ್ಪು ಆಗಿರುವುದಿಲ್ಲವೆಂದೂ, ತದನುಸಾರವಾಗಿ, ರಿಟ್ ಅರ್ಜಿಗಳನ್ನು ವಜಾ ಮಾಡಬೇಕೆಂದು ನಿವೇದಿಸಿಕೊಂಡಿರುತ್ತಾರೆ.

7. ಸಂಖ್ಯೆ 6 ರಿಂದ 8 ರ ವರೆಗಿನ ಪ್ರತ್ಯಾರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಎಸ್.ಜಿ. ಕಡದಕಟ್ಟಿಯವರು ಸದರಿ ಪ್ರತ್ಯರ್ಜಿದಾರರು ಆರ್.ಐ.ಇ.ಎಸ್.ಐ ಯಿಂದ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದಿರುತ್ತಾರೆ. ಹಾಗಾಗಿ, ಅಧಿಸೂಚನೆಯಲ್ಲಿ ಒಳಗೊಂಡ ವಿದ್ಯಾರ್ಹತೆಯ ವಿವರಣೆಯನ್ನು ಪಾಲಿಸಲಾಗಿರುತ್ತದೆ. ಅವರು, ಅರ್ಜಿದಾರರೊಂದಿಗೆ, ಇಂಗ್ಲೀಷ್‌ನ ಶಿಕ್ಷಕರಂತೆ ಅವರ ಕರ್ತವ್ಯಗಳನ್ನು ಅವರು ನಿಭಾಯಿಸುತ್ತಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಇವರು ಖಾಸಗಿ ಪ್ರತ್ಯರ್ಜಿದಾರರು, ಪದವಿ ಮಟ್ಟದಲ್ಲಿ ಇಂಗ್ಲಿಷ್ ಅನ್ನು ಒಂದು ಐಚ್ಛಿಕ ವಿಷಯವನ್ನಾಗಿ ಓದಿರುವಂಥ ಶಿಕ್ಷಕರಷ್ಟೇ ಸಮರ್ಥರಾಗಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ಹಲವಾರು ವರ್ಷಗಳ ಕಾಲ ಸರ್ಕಾರಿ ಶಾಲೆಗಳಲ್ಲಿ ಸೇವೆ ಮಾಡಿರುವ ಖಾಸಗಿ ಪ್ರತ್ಯರ್ಜಿದಾರರನ್ನು ತೊಂದರೆ ಮಾಡಬಾರದಾಗಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ. ತದನುಸಾರವಾಗಿ, ಇವರು ರಿಟ್ ಅರ್ಜಿಯನ್ನು ವಜಾಗೊಳಿಸಲು ಪ್ರಾರ್ಥಿಸಿರುತ್ತಾರೆ.

8. ವಾದ–ವಿವಾದಗಳ ಹಿನ್ನೆಲೆಯಲ್ಲಿ, ಈ ಮುಂದಿನ ಅಂಶಗಳು ಈ ನ್ಯಾಯಾಲಯದ ಪರಿಗಣನೆಗಾಗಿ ಉದ್ಭವಿಸಿರುತ್ತವೆ:

(1) ಶಿಕ್ಷಕರ ವಿದ್ಯಾರ್ಹತೆಯನ್ನು ನಿಗದಿಪಡಿಸುವ ಪ್ರಾಧಿಕಾರ ಯಾರು?

(2) ರಾಜ್ಯ ಸರ್ಕಾರವು ಶಿಕ್ಷಕರಿಗೆ ವಿದ್ಯಾರ್ಹತೆಯನ್ನು ನಿಗದಿಪಡಿಸಿ, ತಿದ್ದುಪಡಿ ಮಾಡಬಹುದೆ?

**ಉಲ್ಲೇಖಾಂಶ ಸಂಖ್ಯೆ.1**

9. ಪ್ರಶ್ನಿತ ನಿಯಮಗಳು ಈ ಮುಂದಿನಂತಿರುತ್ತದೆ:

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ
## ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 59 ಎಸ್ಆರ್ಇ 2002, ಬೆಂಗಳೂರು, ದಿನಾಂಕ 24.06.2003.

ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2002ರ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಇದರಿಂದ ಬಾಧಿತರಾಗುವ ಸಂಭಾವ್ಯವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೋರಿ, 31ನೇ ಅಕ್ಟೋಬರ್ 2002ರ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ–IVಎ ಯಲ್ಲಿ 2002ರ ಅಕ್ಟೋಬರ್ 31ರಂದು ಅಧಿಸೂಚನೆ ಸಂಖ್ಯೆ ಡಿಪಿಎಆರ್ 59 ಎಸ್ಆರ್ಇ 2002ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಪ್ರಕಟಿಸಿರುವುದರಿಂದ,

### ನಿಯಮಗಳು

*1. **ಅನುಸೂಚಿಯ ತಿದ್ದುಪಡಿ**: ವರ್ಗ– III, ಗೆಜೆಟೆಡ್‌ಯೇತರ ಹುದ್ದೆಗಳ ಶೀರ್ಷಿಕೆಯಡಿಯಲ್ಲಿ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿರುತ್ತದೆ) ರ ಅನುಸೂಚಿಯಲ್ಲಿ*

*(1) ಸರ್ಕಾರಿ ಪ್ರೌಢಶಾಲೆಗಳು, ಹೈಯರ್ ಸೆಕೆಂಡರಿ ಶಾಲೆಗಳು, ಕಾಲೇಜು ಶಿಕ್ಷಣಕ್ಕೆ ಮತ್ತು ಬಹು ಉದ್ದೇಶಿತ ಪ್ರೌಢಶಾಲೆಗಳಿಗೆ ಹೊಂದಿಕೊಂಡ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆಗಳು,*

*ಶಿಕ್ಷಕರ ತರಬೇತಿ ಸಂಸ್ಥೆಗಳು, ಕಿವುಡು ಮತ್ತು ಅಂಧ ಮಕ್ಕಳ ಶಾಲೆಗಳು, ಮಹಿಳಾ ಪರಿಶೀಲನಾ ಅಧಿಕಾರಿಗಳಿಗೆ ಸಂಬಂಧಿಸಿದ ವೃತ್ತಿ ತರಬೇತಿ ಸಂಸ್ಥೆಗಳಲ್ಲಿನ ಸೆಕೆಂಡರಿ ಶಾಲಾ ಸಹಾಯಕ (ದರ್ಜೆ–II) ವೃಂದದ ಪದವೀದರ ಸಹ ಶಿಕ್ಷಕರು ಮತ್ತು ಶಿಕ್ಷಕಿಯರು, ಪುರಸಭಾ ಶಾಲೆಗಳು, ಮಂಡಲಿಗಳ ಆಡಳಿತಾಧಿಕಾರಿಗಳು, ಸಂಸ್ಕೃತ ಕಾಲೇಜುಗಳಲ್ಲಿ ಇಂಗ್ಲಿಷ್ ಶಿಕ್ಷಕರು ಮತ್ತು ಸಾಹಿತ್ಯ ವಿಷಯದ ಸಹಾಯಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಕಚೇರಿಯಲ್ಲಿ ಶೈಕ್ಷಣಿಕ ಸಹಾಯಕರು, ಹಿರಿಯ ಪ್ರಾಥಮಿಕ ಶಾಲೆಗಳ ಪದವೀಧರ ಮುಖ್ಯೋಪಾಧ್ಯಾಯರು ಮತ್ತು ಮುಖ್ಯೋಪಾದ್ಯಾಯನಿಯರು, ಕ್ರಾಫ್ಟ್ ಆರ್ಗನೈಜರ್, ಕ್ರಮಸಂಖ್ಯೆ 37ರಲ್ಲಿನ ಶಿಕ್ಷಕರ ತರಬೇತಿ ಸಂಸ್ಥೆಯ ಗೆಜೆಟೆಡ್‌ಯೇತರ ಮುಖ್ಯೋಪಾಧ್ಯಾಯರು ಹುದ್ದೆಗಳ ಪ್ರವರ್ಗಕ್ಕೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ, ಈ ಮುಂದಿನವುಗಳನ್ನು ಪ್ರತಿಯೋಜಿಸಿ, ಎಂದರೆ:*

| | | |
|---|---|---|
| 37. ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಂಡ ಸರ್ಕಾರಿ ಪ್ರೌಢಶಾಲೆಗಳು, ಸಂಯುಕ್ತ ಪದವಿಪೂರ್ವ ಕಾಲೇಜುಗಳು, ಸಂಯುಕ್ತ ಪ್ರೌಢಶಾಲೆಗಳಲ್ಲಿ ಸೆಕೆಂಡರಿ ಶಾಲೆಗಳ ಸಹಾಯಕ (ದರ್ಜೆ–II) ವೃಂದ ಪದವೀದರ | (i) ಶೇ.50ರಷ್ಟು ನೇರ ನೇಮಕಾತಿಯಿಂದ; ಮತ್ತು<br><br>(ii) ಪ್ರಾಥಮಿಕ ಶಾಲಾ ಸಹಶಿಕ್ಷಕರ ವೃಂದದಿಂದ ಮತ್ತು ಸರ್ಕಾರಿ ಪ್ರೌಢಶಾಲೆಗಳ ಕ್ರಾಫ್ಟ್ (ಕರಕುಶಲ) ಶಿಕ್ಷಕರು ದರ್ಜೆ–I, ಸಂಗೀತ ಶಿಕ್ಷಕರು, ಚಿತ್ರಕಲೆ ಶಿಕ್ಷಕರ ವೃಂದಗಳಿಂದ 45:2:1:1:1ರ ಅನುಪಾತದಲ್ಲಿ ನರ್ಸರಿ ಶಾಲಾ ಶಿಕ್ಷಕರ ವೃಂದದಿಂದ | ಮುಂಬಡ್ತಿ ಮತ್ತು ನೇರ ನೇಮಕಾತಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ: ಸೆಕೆಂಡರಿ ಶಾಲೆಗಳ ಸಹ ಶಿಕ್ಷಕರ (ದರ್ಜೆ–II) ವೃಂದ:<br><br>(1)ಕಲಾ ವಿಭಾಗದ ಸಹಶಿಕ್ಷಕರುಗಳಿಗೆ ಸಂಬಂಧಿಸಿದಂತೆ:–<br><br>(ಎ)ಈ ಮುಂದಿನ ವಿಷಯಗಳಲ್ಲಿ |

| | | |
|---|---|---|
| ಸಹಶಿಕ್ಷಕರು/ ಶಿಕ್ಷಕಿಯರು, ಎಂದರೆ:–<br><br>1. ಕನ್ನಡ, ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಮಾಧ್ಯಮ ಶಾಲೆಗಳಲ್ಲಿ ಕಲಾ ವಿಭಾಗದ ಸಹಾಯಕ ಶಿಕ್ಷಕರು.<br><br>2. ಕನ್ನಡ ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣದ ಸಹಶಿಕ್ಷಕರು.<br><br>3. ಕನ್ನಡ, ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಮಾಧ್ಯಮ ಶಾಲೆಗಳಲ್ಲಿ ಜೀವಶಾಸ್ತ್ರ ವಿಜ್ಞಾನದ ಸಹ ಶಿಕ್ಷಕರು<br><br>4. ಕನ್ನಡ, ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ, ತಮಿಳು, | ಪರಂತು, ಬಡ್ತಿಗಾಗಿ ಕ್ರಾಫ್ಟ್ ಶಿಕ್ಷಕರ ದರ್ಜೆ–I ನರ್ಸರಿ ಶಾಲಾ ಶಿಕ್ಷಕರು, ಸಂಗೀತ ಶಿಕ್ಷಕರು ಮತ್ತು ಚಿತ್ರಕಲೆ ಶಿಕ್ಷಕರುಗಳ ಯಾವುದೇ ವೃಂದಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗದಿದ್ದಲ್ಲಿ, ಆಗ ಅಷ್ಟೂ ಸಂಖ್ಯೆಯ ಹುದ್ದೆಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.<br><br>ಮತ್ತೂ ಪರಂತು, ಪ್ರಾಥಮಿಕ ಶಾಲಾ ಸಹ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗದಿದ್ದಲ್ಲಿ, ಆಗ ಅಷ್ಟೂ ಸಂಖ್ಯೆಯ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. | ಅಂದರೆ, ಇತಿಹಾಸ, ಅರ್ಥಶಾಸ್ತ್ರ, ಭೂ ಗರ್ಭಶಾಸ್ತ್ರ, ರಾಜಕೀಯ ಶಾಸ್ತ್ರ, ಸಮಾಜ ಶಾಸ್ತ್ರಗಳ ಯಾವುದೇ ಎರಡು ವಿಷಯಗಳಲ್ಲಿ ಬ್ಯಾಚುಲರ್ ಪದವಿಯನ್ನು ಹೊಂದಿರಲೇಬೇಕು ಮತ್ತು<br><br>(ಬಿ) ಶಿಕ್ಷಣದಲ್ಲಿ (ಬಿ.ಎಡ್) ಪದವಿಯನ್ನು ಹೊಂದಿರಲೇಬೇಕು.<br><br>(2) ದೈಹಿಕ ಶಿಕ್ಷಣದ ಸಹ ಶಿಕ್ಷಕರುಗಳಿಗೆ ಸಂಬಂಧಿಸಿದಂತೆ<br><br>(ಎ) ಈ ಮುಂದಿನ ವಿಷಯಗಳಲ್ಲಿ ಅಂದರೆ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಅಥವಾ ಭೌತಶಾಸ್ತ್ರ, ಗಣಿತ ಶಾಸ್ತ್ರ, ಕಂಪ್ಯೂಟರ್ ವಿಜ್ಞಾನ ಅಥವಾ ಭೌತಶಾಸ್ತ್ರ, ಗಣಿತ ಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಿತ ಶಾಸ್ತ್ರ ಇವುಗಳಲ್ಲಿ |

| | | |
|---|---|---|
| ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಭಾಷಾ ಸಹಾಯಕರು. | ನೇರ ನೇಮಕಾತಿಯಿಂದ: ಸಂಬಂಧಪಟ್ಟ ವಿಭಾಗದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಅಥವಾ ಅಂಥ ಇತರೆ ಅಧಿಕಾರಿಯ (ಇನ್ನು ಮುಂದೆ ಆಯ್ಕೆ ಪ್ರಾಧಿಕಾರವೆಂದು ಉಲ್ಲೇಖಿಸ ಲಾಗಿರುತ್ತದೆ) (2)ನೇ ಅಂಕಣದಲ್ಲಿ (1) ರಿಂದ (4)ರಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳ ಪ್ರತೀ ಪ್ರವರ್ಗಕ್ಕೆ ಸಂಬಂಧಿಸಿದಂತೆ ಪ್ರತೀ ವಿಭಾಗದ ಪ್ರತೀ ಅಧಿಕಾರ ವ್ಯಾಪ್ತಿಯಡಿಯಲ್ಲಿ ಬರುವ ಶೈಕ್ಷಣಿಕ ಜಿಲ್ಲೆಗಳಲ್ಲಿ ಲಭ್ಯವಾಗುವ ಹುದ್ದೆಗಳ ಸಂಖ್ಯೆಯನ್ನು ಪರಿಗಣಿಸಿದ ತರುವಾಯ, ಕರ್ನಾಟಕ ರಾಜ್ಯಪತ್ರದಲ್ಲಿ ಹುದ್ದೆಗಳ ಬಗ್ಗೆ ಜಾಹೀರಾತು ನೀಡಿದ ತರುವಾಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸತಕ್ಕದ್ದು. ಅಲ್ಲದೆ ರಾಜ್ಯದಲ್ಲಿ ಹೆಚ್ಚು | ಎರಡು ವಿಷಯಗಳು ಕಡ್ಡಾಯ ಐಚ್ಛಿಕ ವಿಷಯಗಳಾಗಿದ್ದು, ಇವುಗಳಲ್ಲಿನ ಪದವಿಯನ್ನು ಹೊಂದಿರತಕ್ಕದ್ದು. ಮತ್ತು<br><br>(ಬಿ) ಶಿಕ್ಷಣದಲ್ಲಿ (ಬಿ.ಎಡ್.,) ಪದವಿಯನ್ನು ಹೊಂದಿರಬೇಕು.<br><br>(3) ಜೀವಶಾಸ್ತ್ರದ ಸಹ ಶಿಕ್ಷಕನಿಗೆ ಸಂಬಂಧಿಸಿದಂತೆ;–<br><br>(ಎ)ಆತ, ಈ ಮುಂದಿನ ಅಂದರೆ ರಸಾಯನಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳಲ್ಲಿ ಕಡ್ಡಾಯವಾಗಿ ಎರಡು ವಿಷಯಗಳಲ್ಲಿ ಬ್ಯಾಚುಲರ್ ಪದವಿಯನ್ನು ಹೊಂದಿರಬೇಕು. ರಸಾಯನ ಶಾಸ್ತ್ರವು ಕಡ್ಡಾಯವಾದ ಐಚ್ಛಿಕ ವಿಷಯವಾಗಿರಬೇಕು ಮತ್ತು |

| | | |
|---|---|---|
| | ಪ್ರಸಾರವಿರುವ ಎರಡು ಪ್ರಸಿದ್ಧ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡತಕ್ಕದ್ದು.<br><br>ಅರ್ಜಿಯನ್ನು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕದೊಂದಿಗೆ ಆ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಅರ್ಜಿ ನಮೂನೆಯಲ್ಲಿ ಸಲ್ಲಿಸತಕ್ಕದ್ದು.<br>ಆಯ್ಕೆ ಪ್ರಾಧಿಕಾರವು, ಸರ್ಕಾರವು ನಿರ್ದಿಷ್ಟ ಪಡಿಸಬೇಕಾದ ನಡಾವಳಿ ಯೊಂದಿಗೆ, ಅದಕ್ಕನುಸಾರವಾಗಿ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆ ಯನ್ನು ಆಯೋಜಿಸತಕ್ಕದ್ದು.<br>ಆಯ್ಕೆ ಪ್ರಾಧಿಕಾರವು, ಅರ್ಜಿಯನ್ನು ಕರೆಯುವ ಸಮಯದಲ್ಲಿಯೇ ಪರೀಕ್ಷೆಗೆ ನಿಗದಿಪಡಿಸಿರುವ ವಿಷಯ, ದಿನಾಂಕ, ಸಮಯ ಸ್ಥಳ ಮುಂತಾದಂಥ ಸ್ಪರ್ಧಾತ್ಮಕ ಪರೀಕ್ಷೆಯ ಸಂಬಂಧದಲ್ಲಿ ಎಲ್ಲಾ | (ಬಿ) ಶಿಕ್ಷಣದಲ್ಲಿ (ಬಿಎಡ್) ಪದವಿಯನ್ನು ಹೊಂದಿರಲೇಬೇಕು. ಪರಂತು, ಮೇಲಿನ (1) ರಿಂದ (3)ರ ವರೆಗೆ ನಿರ್ದಿಷ್ಟ ಪಡಿಸಿದ ವಿದ್ಯಾರ್ಹತೆಗಳಿಗೆ ಹೆಚ್ಚುವರಿಯಾಗಿ<br><br>(ಎ) ಶಿಕ್ಷಕರು ತಾವು ಬೋಧಿಸಬೇಕಾದ ಮಾಧ್ಯಮದ ಭಾಷೆಯನ್ನು ಪದವಿ ಮಟ್ಟದಲ್ಲಿ ಅಧ್ಯಯನ ಮಾಡಿರಬೇಕು.<br><br>(ಬಿ) ಅವರು ಬೋಧಿಸಬೇಕಾದಂಥ ಮಾಧ್ಯಮದ ಭಾಷೆಯನ್ನು ಪದವಿ ಮಟ್ಟದಲ್ಲಿ ಅಧ್ಯಯನ ಮಾಡಿರದಿದ್ದಲ್ಲಿ, ಸಂಬಂಧಪಟ್ಟ ಭಾಷೆಯನ್ನು ಎಸ್.ಎಸ್.ಎಲ್.ಸಿ ಮಟ್ಟದಲ್ಲಿ, ಮೊದಲ ಅಥವಾ ಎರಡನೇ ಭಾಷೆಯಾಗಿ ಅಧ್ಯಯನ ಮಾಡಿರಲೇ ಬೇಕು; |

| | | |
|---|---|---|
| | ಅವಶ್ಯಕ ವಿವರಗಳನ್ನು ಒದಗಿಸತಕ್ಕದ್ದು.<br><br>ಆಯ್ಕೆ ಪ್ರಾಧಿಕಾರವು, ಈ ಮುಂದಿನ ಸಮಗ್ರತೆಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:<br><br>(ಎ) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇ. ಎಪ್ಪತ್ತರಷ್ಟು;<br>ಸಂದರ್ಭಾನುಸಾರ ಬಿ.ಎ ಮತ್ತು ಬಿ.ಎಸ್ಸಿ. ಪದವಿಗಳಲ್ಲಿ ಗಳಿಸಿದ ಅಂಕಗಳನ್ನು ಶೇ. ಇಪ್ಪತ್ತರಷ್ಟು; ಮತ್ತು<br><br>(ಸಿ) ಬಿ.ಎಡ್. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ. ಹತ್ತರಷ್ಟು ಅಂಕಗಳನ್ನು ಪರಿಗಣಿಸತಕ್ಕದ್ದು.<br>ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ, ಆಯ್ಕೆ ಪ್ರಾಧಿಕಾರವು ಸಾಧ್ಯವಾದಷ್ಟು ಮಟ್ಟಿಗೆ, ನೇಮಕಾತಿಯ | ಅಥವಾ ಎಸ್.ಎಸ್.ಎಲ್.ಸಿ ಮಟ್ಟದಲ್ಲಿಯಾಗಲೀ ಅಥವಾ ಪದವಿ ಮಟ್ಟದಲ್ಲಿಯಾಗಲೀ ಸಂಬಂಧಪಟ್ಟ ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು; ಅಥವಾ ಯು.ಜಿ.ಸಿ.ಯು ಮಾನ್ಯತೆ ನೀಡಿರುವ ವಿಶ್ವ ವಿದ್ಯಾಲಯದಲ್ಲಿ ಅನುದಾನ ನೀಡಿರುವ ಸಂಬಂಧಪಟ್ಟ ಭಾಷೆಯಲ್ಲಿ ಡಿಪ್ಲೊಮೊವನ್ನು ಪಡೆದಿರಬೇಕು. ಅಥವಾ ಕರ್ನಾಟಕ ಸೆಕೆಂಡರಿ ಎಜ್ಯುಕೇಷನ್ ಎಕ್ಸಾಮಿನೇಷನ್ ಬೋರ್ಡ್ ಅಥವಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿರುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪ್ರಮಾಣಪತ್ರವನ್ನು ಪಡೆದಿರಲೇಬೇಕು. ಅಲ್ಲಿ ಅವರು ಬೋಧಿಸುವ ಭಾಷೆ ಸಾಮಾನ್ಯವಾಗಿ ಕನ್ನಡವೇ ಆಗಿರುತ್ತದೆ. |

| | | |
|---|---|---|
| | ಸಮಯದಲ್ಲಿ ಅಭ್ಯರ್ಥಿಯು ಕೋರಿರುವ ನಿರ್ದಿಷ್ಟ ಹುದ್ದೆ ಮತ್ತು ಜಿಲ್ಲೆಯ ಆಯ್ಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಯ ಆಯ್ಕೆಯನ್ನೇ ಪರಿಗಣಿಸತಕ್ಕದ್ದು. ಪರಂತು, ಮೇಲಿನ ಹುದ್ದೆಗಳನ್ನು ಸಿದ್ಧಪಡಿಸುವಾಗ, ಅಭ್ಯರ್ಥಿಯು ಶಿಕ್ಷಣದಲ್ಲಿ (ಬಿ.ಎಡ್) ಪದವಿಯನ್ನು ಹೊಂದಿದ್ದು, ಗುತ್ತಿಗೆ ಆಧಾರದ ಮೇಲೆ ಭಾರತ ಸರ್ಕಾರ ಜನಗಣತಿ ಸಂಸ್ಥೆಯಲ್ಲಿ ಅಥವಾ ಬೇರೆ ಬೇರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಅಥವಾ ಗೌರವಧನ ಪಡೆಯುತ್ತಿದ್ದ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರೆ, ಅಂಥ ಅಭ್ಯರ್ಥಿಗೆ ಆತ ಪಡೆದಿರುವ ಅಂಕಗಳಿಗೆ ಶೇ. ಎರಡರಷ್ಟು ಕೃಪಾಂಕವನ್ನು ಸೇರಿಸತಕ್ಕದ್ದು. ಮತ್ತೂ ಪರಂತು, ಆಯ್ಕೆ ಪಟ್ಟಿಯನ್ನು ಕೆ.ಸಿ.ಎಸ್. | 4. ಭಾಷಾ ಸಹ ಶಿಕ್ಷಕರುಗಳಿಗೆ ಸಂಬಂಧಿಸಿದಂತೆ<br><br>(ಎ) ಸಂಬಂಧಪಟ್ಟ ಭಾಷೆಗಳಲ್ಲಿ ಅಂದರೆ ಕನ್ನಡ ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ, ತೆಲುಗು, ತಮಿಳು ಮತ್ತು ಸಂಸ್ಕೃತಗಳಲ್ಲಿ ಒಂದನ್ನು ಐಚ್ಛಿಕ ಭಾಷೆಯನ್ನಾಗಿ ತೆಗೆದುಕೊಂಡು ಪದವಿಯನ್ನು ಹೊಂದಿರತಕ್ಕದ್ದು ಅಥವಾ ಕರ್ನಾಟಕ ಸೆಕೆಂಡರಿ ಎಜ್ಯುಕೇಷನ್ ಮಂಡಳಿಯು ನಡೆಸುವ ಕನ್ನಡದಲ್ಲಿ 4 ವರ್ಷಗಳ ಭಾಷಾ ಪಂಡಿತ್ ಕೋರ್ಸ್, ಸಂಸ್ಕೃತದ ವಿದ್ವಾನ್ ಮತ್ತು ಉರ್ದು ಮುನ್ಷಿಯನ್ನು ಪೂರ್ಣಗೊಳಿಸಿರಬೇಕು. ಮತ್ತು<br><br>(ಬಿ) ಶಿಕ್ಷಣದಲ್ಲಿ (ಬಿಎಡ್) ಪದವಿಯನ್ನು ಪಡೆದಿರಬೇಕು; ಪರಂತು, |

| | | |
|---|---|---|
| | (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಯಾವುದೇ ಕಾನೂನಿನಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಉಪಬಂಧಗಳಿಗನುಸಾರವಾಗಿ ಮತ್ತು ಕಾಲಕಾಲಕ್ಕೆ ಈ ಸಂಬಂಧದಲ್ಲಿ ಹೊರಡಿಸಿರುವ ಸರ್ಕಾರಿ ಆದೇಶಗಳಿಗನುಸಾರವಾಗಿ ಸಿದ್ಧಪಡಿಸತಕ್ಕದ್ದು.<br><br>ಆಯ್ಕೆ ಪ್ರಾಧಿಕಾರವು, ಆಯ್ಕೆಯಾದ (ವಿಭಾಗೀಯ ಮಟ್ಟದಲ್ಲಿ) ಅಭ್ಯರ್ಥಿಗಳ ಮುಖ್ಯ ಪಟ್ಟಿಯಿಂದ ಕೌನ್ಸಿಲಿಂಗ್ ಮೂಲಕ ಅಭ್ಯರ್ಥಿಗಳನ್ನು ಹಂಚಿಕೆ ಮಾಡುವ ಮೂಲಕ ಪ್ರತೀ ಶೈಕ್ಷಣಿಕ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಆಯ್ಕೆಯಾದ ಅಭ್ಯರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಅಂಥ ಪ್ರತಿಯೊಂದು ಪಟ್ಟಿಯನ್ನು ಇನ್ನು ಮುಂದೆ 'ಆಯ್ಕೆಯಾದ | ಪದವಿ ಮಟ್ಟದಲ್ಲಿ ಐಚ್ಛಿಕ ವಿಷಯದಂತೆ ಸಂಬಂಧಪಟ್ಟ ಭಾಷೆಯನ್ನು ಅಧ್ಯಯನ ಮಾಡಿರದಂಥ ಬ್ಯಾಚುಲರ್ ಪದವಿಧರರನ್ನು,<br><br>(ಎ) ಸಂಬಂಧಪಟ್ಟ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಲ್ಲಿ ಸಂಬಂಧಪಟ್ಟ ಅಭ್ಯರ್ಥಿಯನ್ನು ನೇಮಕಾತಿಗಾಗಿ ಪರಿಗಣಿಸತಕ್ಕದ್ದು.<br><br>(ಬಿ) ಇಂಗ್ಲೀಷ್ ಭಾಷಾ ಸಹ ಶಿಕ್ಷಕ ಹುದ್ದೆಗೆ ಸಂಬಂಧಿಸಿದಂತೆ, ದಕ್ಷಿಣ ಭಾರತದ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್ ನಿಂದ ಇಂಗ್ಲಿಷ್ ಭಾಷೆಯಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದಿರುವಂಥ ಅಭ್ಯರ್ಥಿಗಳನ್ನು ನೇಮಕಾತಿಗೆ |

| | | |
|---|---|---|
| | ಅಭ್ಯರ್ಥಿಗಳ ಮುಖ್ಯ ಪಟ್ಟಿ' (ಜಿಲ್ಲಾ ಮಟ್ಟ) ಯೆಂದು ಕರೆಯಬಹುದು. ಆಯ್ಕೆ ಪ್ರಾಧಿಕಾರವು, ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು, ಅಧಿಸೂಚಿಸಿದ ಹುದ್ದೆಗಳ ಸಂಖ್ಯೆಯಲ್ಲಿ ಶೇ. ಹತ್ತರಷ್ಟನ್ನು ಮೀರದಂತೆ ಮುಖ್ಯ ಪಟ್ಟಿಯಲ್ಲಿ ಒಳಗೊಳ್ಳದ ಅಭ್ಯರ್ಥಿಗಳ ಒಂದು ಪಟ್ಟಿಯಾಗಿ ಸಿದ್ಧಪಡಿಸತಕ್ಕದ್ದು. ಹಾಗೆ ಸಿದ್ಧಪಡಿಸಿದ ಪಟ್ಟಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಈ ನಿಯಮಗಳಡಿಯಲ್ಲಿ ಅಥವಾ ಇಂಥ ನೇಮಕಾತಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ರೂಪಿಸಿದ ಯಾವುದೇ ಇತರೆ ನಿಯುಮಗಳಡಿಯಲ್ಲಿ, ಸೆಕೆಂಡರಿ ಶಾಲಾ ಸಹ ಶಿಕ್ಷಕರ ದರ್ಜೆ–II ರ ತರುವಾಯದ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಪ್ರಕಟಿಸುವ | ಸಂಬಂಧಿಸಿದಂತೆ ಅರ್ಹರೆಂದು ಪರಿಗಣಿಸತಕ್ಕದ್ದು.<br><br>(ಸಿ) ಹಿಂದಿ ಭಾಷಾ ಸಹ ಶಿಕ್ಷಕನ ಸಂದರ್ಭದಲ್ಲಿ ಆತ ಹಿಂದಿ ಐಚ್ಛಿಕ ವಿಷಯುವನ್ನು ಹೊಂದಿರತಕ್ಕದ್ದು. ಮತ್ತು ಸಂಬಂಧಪಟ್ಟ ವಿಷಯದೊಂದಿಗೆ ಶಿಕ್ಷಣದಲ್ಲಿ ಪದವಿಯನ್ನು ಅಥವಾ ಬೋಧನಾ ವಿಧಾನಗಳಂಥ ವಿಷಯಗಳನ್ನು ಹೊಂದಿರತಕ್ಕದ್ದು.<br><br>(ಡಿ) ಇಂಗ್ಲಿಷ್ ಭಾಷಾ ಸಹ ಶಿಕ್ಷಕರ ಸಂದರ್ಭದಲ್ಲಿ, ಬಿ.ಎಡ್., ಪದವಿ ಮಟ್ಟಗಳಲ್ಲಿ ಬೋಧನಾ ವಿಧಾನದಂತೆ ಇಂಗ್ಲಿಷನ್ನು ಅಧ್ಯಯನ ಮಾಡದಂಥ ಆದರೆ ದಕ್ಷಿಣ ಭಾರತದ ರೀಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಲಾಂಗ್ವೇಜ್ ನಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದಿರುವ |

| | | |
|---|---|---|
| | ದಿನಾಂಕದಿಂದ ಮುಕ್ತಾಯವಾಗತಕ್ಕದ್ದು. ಆದಾಗ್ಯೂ, ನೇಮಕಾತಿಯು ಅಧಿಸೂಚಿತ ಹುದ್ದೆಗಳ ಮಟ್ಟಿಗೆ ಮಾತ್ರ ಸೀಮಿತವಾಗಿರತಕ್ಕದ್ದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ-ನಿರ್ದೇಶಕರು ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರೆ ಅಧಿಕಾರಿಗಳು (ಇನ್ನು ಮುಂದೆ ನೇಮಕಾತಿ ಪ್ರಾಧಿಕಾರವೆಂದು ಉಲ್ಲೇಖಿಸಲಾಗಿರುತ್ತದೆ) ಪ್ರತಿಯೊಬ್ಬ ಅಭ್ಯರ್ಥಿಯು ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳಲ್ಲೂ ಯುಕ್ತವಾಗಿದ್ದಾನೆಂದು ಅವಶ್ಯಕವಾಗಿ ಭಾವಿಸಬಹುದಾದಂಥ, ಅಂಥ ವಿಚಾರಣೆಯ ತರುವಾಯ ಸ್ವತಃ ಅವರಿಗೆ ಮನವರಿಕೆಯಾದ ತರುವಾಯ, ಪಟ್ಟಿಯಲ್ಲಿ | ಅಭ್ಯರ್ಥಿಯನ್ನು ನೇಮಕಾತಿಗೆ ಸಂಬಂಧಿಸಿದಂತೆ ಅರ್ಹನೆಂದು ಪರಿಗಣಿಸತಕ್ಕದ್ದು. ಮತ್ತೂ ಪರಂತು, ಹಿಂದಿ ಭಾಷಾ ಸಹಾಯಕನ ಸಂದರ್ಭದಲ್ಲಿ,<br><br>(i) ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾವು ಆಯೋಜಿಸಿರುವ ಕೋರ್ಸುಗಳಾದ ರಾಷ್ಟ್ರಭಾಷಾ ಪ್ರವೀಣ್ ಮತ್ತು ಶಿಕ್ಷಾ ಸ್ನಾತಕ (ಬೋಧನಾ ಮಾದರಿಯಂತೆ ಹಿಂದಿಯೊಂದಿಗೆ ಮತ್ತು ಮತ್ತೊಂದು ಭಾಷೆ) ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವಂಥ ಹಾಗೂ ಕನ್ನಡದೊಂದಿಗಿನ ಪದವಿ ಪೂರ್ವ ಕೋರ್ಸುಗಳು ಅಥವಾ ಯಾವುದೇ ಇತರ ಪ್ರಾದೇಶಿಕ ಭಾಷೆಯನ್ನು ಒಂದು ವಿಷಯದಂತೆ ಅಥವಾ ಪಿಯುಸಿ ಮಟ್ಟದಲ್ಲಿನ ಶಿಕ್ಷಣದ ಮಾಧ್ಯಮದಂತೆ, ಕನ್ನಡದೊಂದಿಗೆ ಅಥವಾ ಯಾವುದೇ ಇತರೆ |

| | | |
|---|---|---|
| | ಕಂಡುಬಂದಂಥ ಹೆಸರುಗಳಲ್ಲಿ ಆದೇಶದಲ್ಲಿನ ಖಾಲಿ ಸ್ಥಾನಗಳಲ್ಲಿ ಮೇಲೆ ಸೂಚಿಸಲಾದಂಥ ರೀತಿಯಲ್ಲಿ ಸಿದ್ಧಪಡಿಸಿದ, ಆಯ್ಕೆಯಾದ ಅಭ್ಯರ್ಥಿಗಳು (ಜಿಲ್ಲಾ ಮಟ್ಟದಲ್ಲಿ) ಅರ್ಹತಾ ಪಟ್ಟಿಯಲ್ಲಿ ಸೇರಿಕೊಂಡಂಥ ಹೆಸರುಗಳ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬಹುದು. | ಪ್ರಾದೇಶಿಕ ಭಾಷೆಯೊಂದಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಯನ್ನು;<br><br>(ii) ರಾಜ್ಯ ಸರ್ಕಾರವು ತತ್ಸಮಾನವೆಂದು ಘೋಷಿಸಬಹುದಾದಂಥ ಯಾವುದೇ ಇತರ ವಿದ್ಯಾರ್ಹತೆಯನ್ನು ಹೊಂದಿರುವಂಥ ಅಭ್ಯರ್ಥಿಯನ್ನು ಆಯ್ಕೆಗೆ ಸಂಬಂಧಿಸಿದಂತೆ ಪರಿಗಣಿಸಬಹುದು.<br>ಬಡ್ತಿಗೆ ಸಂಬಂಧಿಸಿದಂತೆ: ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 6ನೇ ನಿಯಮದ ಉಪಬಂಧಗಳ ಪ್ರಕಾರ ವಯೋಮಿತಿ ಅಂಕಣ3 ರಲ್ಲಿ ನಮೂದಿಸಿರುವ ವೃಂದದಲ್ಲಿ 5 ವರ್ಷಗಳಿಗಿಂತ ಕಡಿಮೆ ಇರದಂತೆ ಸೇವೆಯನ್ನು ಹೊಂದಿರಬೇಕು. |

ಪರಂತು, ಸರ್ಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಅಥವಾ ಗೌರವಧನ ಪಡೆಯುವ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಗರಿಷ್ಠ ವಯೋಮಿತಿಯು ಗರಿಷ್ಠ ಹತ್ತು ವರ್ಷಗಳಿಗೆ ಒಳಪಟ್ಟು, ಅವರು ಅಂಥ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ ವರ್ಷಗಳಷ್ಟು ಹೆಚ್ಚಿಸತಕ್ಕದ್ದು.

ಪರಂತು, ಗರಿಷ್ಠ ವಯೋಮಿತಿಯು ಮುಂಬಡ್ತಿಗೆ ಅನ್ವಯವಾಗತಕ್ಕದ್ದಲ್ಲ.

10. ಎನ್‌ಸಿಟಿಇ ಯನ್ನು ಶಿಕ್ಷಕರ ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಲು ರಾಷ್ಟ್ರೀಯ ನಿಕಾಯುವನ್ನಾಗಿ ಠರಾವಿನ ಮೂಲಕ 1993ನೇ ವರ್ಷದಲ್ಲಿ ರೂಪಿಸಲಾಗಿರುತ್ತದೆ. ಇದು ಕೇವಲ ಸಲಹೆ ನೀಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದರಿಂದ, ಎನ್‌ಸಿಟಿಇ ಅಧಿನಿಯಮ, 1993 (1993ರ 73ನೇ ಅಧಿನಿಯಮ)ವನ್ನು ಸಹ ಹೊರಡಿಸಿರುತ್ತದೆ. ಸದರಿ ಅಧಿನಿಯಮದ ಉದ್ದೇಶವೆಂದರೆ, ರಾಷ್ಟ್ರದಾದ್ಯಂತ ಶಿಕ್ಷಕರ ಶೈಕ್ಷಣಿಕ ವ್ಯವಸ್ಥೆಯ ಯೋಜಿತ ಮತ್ತು ಸಮನ್ವಯ ಪೂರ್ಣ ಅಭಿವೃದ್ಧಿಯ ದೃಷ್ಟಿಯೊಂದಿಗೆ ಮತ್ತು ಶಿಕ್ಷಕರ ಶೈಕ್ಷಣಿಕ ವ್ಯವಸ್ಥೆ ಹಾಗೂ ಅದಕ್ಕೆ ಸಂಬಂಧಿಸಿದಂಥ ಮಾನದಂಡಗಳ ನಿಯಂತ್ರಣ ಮತ್ತು ಯುಕ್ತ ನಿರ್ವಹಣೆಯ ದೃಷ್ಟಿಯೊಂದಿಗೆ ರಾಷ್ಟ್ರೀಯ ಪರಿಷತ್ತಿನ ಸ್ಥಾಪನೆಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸುವುದೇ ಆಗಿರುತ್ತದೆ. ಶಿಕ್ಷಕರಿಗೆ ಸಂಬಂಧಿಸಿದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಧ್ಯಾಯ–Iರಲ್ಲಿ ಚರ್ಚಿಸಲಾಗಿರುತ್ತದೆ. ಎಸ್‌ಸಿಟಿಇಯ ಕಾರ್ಯ ನಿರ್ವಹಣೆಯನ್ನು ಅಧಿನಿಯಮದ IIIನೇ ಅಧ್ಯಾಯದಲ್ಲಿ ಚರ್ಚಿಸಲಾಗಿರುತ್ತದೆ. 12(ಡಿ) ಪ್ರಕರಣವನ್ನು, ಶಾಲೆಗಳಲ್ಲಿ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಶಿಕ್ಷಕರಾಗಿ ನಿಯೋಜನೆಯಾಗಬೇಕಾದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕನಿಷ್ಠ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ವಿಧಿಸಲು ಎನ್‌ಸಿಟಿಇಯನ್ನು ಅಗತ್ಯಪಡಿಸಿರುತ್ತದೆ. ಹಾಗಾಗಿ, ಎನ್‌ಸಿಟಿಇ ಯು, ಶಿಕ್ಷಕರಿಗೆ ಸಂಬಂಧಿಸಿದಂತೆ ಕನಿಷ್ಠ ವಿದ್ಯಾರ್ಹತೆಯನ್ನು ಗೊತ್ತುಪಡಿಸಲು ಇರುವ ಸಕ್ಷಮ ಪ್ರಾಧಿಕಾರವಾಗಿರುತ್ತದೆಂಬುದು ಸ್ಪಷ್ಟವಾಗಿರುತ್ತದೆ. 2001ರ ವಿನಿಯಮನಗಳ ಮೂಲಕ, ಸೆಕೆಂಡರಿ / ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಎನ್‌ಸಿಟಿಇಯು ನಿಗದಿಪಡಿಸಿದ

ವಿದ್ಯಾರ್ಹತೆಯು ಬಿ.ಎಡ್ ಪದವಿ ಅಥವಾ ಅದರ ತತ್ಸಮಾನ ಪದವಿಯ ಪದವೀದರನಾಗಿರಬೇಕೆಂಬುದಾಗಿರುತ್ತದೆ. 2001ರ ವಿನಿಯಮನಗಳ 5ನೇ ವಿನಿಯಮನವು ಯಾವುದೇ ಷರತ್ತುಗಳನ್ನು ಸಡಿಲಿಕೆ ಮಾಡುವುದಕ್ಕೆ ಅಧಿಕಾರವನ್ನು ನೀಡುತ್ತದೆ ಮತ್ತು ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:

**೫. ಸಡಿಲಿಕೆ ಮಾಡುವುದಕ್ಕೆ ಅಧಿಕಾರ:**

> *ಸಂಬಂಧಪಟ್ಟ ಸರ್ಕಾರದಿಂದ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಈಗಿರುವ ವಿಶೇಷ ಸಂದರ್ಭಗಳು, ಕೆಲಕಾಲ ನಿಬಂಧನೆಗಳ ಕೆಲವು ಉಪಬಂಧಗಳ ಸಡಿಲಿಕೆಯನ್ನು ಸಮರ್ಥಿಸುತ್ತಿವೆಯೆಂದು ಪರಿಷತ್ತಿಗೆ ಮನವರಿಕೆಯಾದಾಗ, ಆ ಮಟ್ಟಿಗೆ ಮತ್ತು ನ್ಯಾಯಯುತವಾದ ಮತ್ತು ನ್ಯಾಯ ಸಮ್ಮತವಾದ ರೀತಿಯಲ್ಲಿ ಇದನ್ನು ಪರಿಗಣಿಸಬೇಕಾದ ಅವಶ್ಯಕತೆ ಇದೆಯೆಂಬ ಷರತ್ತುಗಳಿಗೆ ಒಳಪಟ್ಟು ಅಂಥ ಉಪಬಂಧದ ಸಡಿಲಿಕೆಗೆ ಅನುಮತಿ ನೀಡಬಹುದು.*

11. ಹಾಗಾಗಿ, ಎನ್‌ಸಿಟಿಇ ನಿಗದಿಪಡಿಸಿರುವ ವಿದ್ಯಾರ್ಹತೆಯು, ಶಿಕ್ಷಣವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಮತ್ತು ಇತರೆ ಪ್ರಾಧಿಕಾರಗಳು ಸ್ಥಾಪಿಸಿರುವ, ನಡೆಸುತ್ತಿರುವ ಅಥವಾ ಅನುದಾನಿತ ಅಥವಾ ಮಾನ್ಯತೆ ಪಡೆದಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪರಿಗಣಿಸಬೇಕಾದ ಅಭ್ಯರ್ಥಿಗಳಿಗೆ ಸಂಬಂಧಿಸಿದಂಥ ಅಗತ್ಯತೆಯು ಆಜ್ಞಾಪಕವಾಗಿರುತ್ತದೆಂಬುದು ಸ್ಪಷ್ಟವಾಗಿರುತ್ತದೆ. 2002ರ ಪ್ರಶ್ನಿತ ನಿಯಮಗಳ ಮೂಲಕ, ಪ್ರತ್ಯರ್ಜಿದಾರ/ರಾಜ್ಯವು, ಏಕಪಕ್ಷೀಯವಾಗಿ, ಭಾಷಾ ಸಹ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳಬೇಕಾದ ಶಿಕ್ಷಕರ ಮಟ್ಟಿಗಿನ ವಿದ್ಯಾರ್ಹತೆಯನ್ನು ದುರ್ಬಲಗೊಳಿಸಿರುತ್ತದೆ. ಮುಂದಿನ ಅಂಕಣವು ನೇಮಕಾತಿಯ ವಿಧಾನವನ್ನು ಸೂಚಿಸುತ್ತದೆ ಮತ್ತು ಮೂರನೇ ಅಂಕಣವು ವಿದ್ಯಾರ್ಹತೆಯನ್ನು ಸೂಚಿಸುತ್ತದೆ. ಪ್ರಸ್ತುತ, ನಾವು ಪ್ರೌಢಶಾಲೆಗಳಿಗಾಗಿನ ಭಾಷಾ ಸಹ ಶಿಕ್ಷಣದೊಂದಿಗೆ

ಸಂಬಂಧಪಡುತ್ತೇವೆ. ಅಂಕಣ ಸಂಖ್ಯೆ4ರಲ್ಲಿ ಭಾಷಾಸಹ ಶಿಕ್ಷಕರಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಈ ಮೇಲೆ ಉದ್ಧರಿಸಲಾಗಿರುತ್ತದೆ. ಭಾಷಾ ಸಹ ಶಿಕ್ಷಕರಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿದ ವಿದ್ಯಾರ್ಹತೆಯು, ಐಚ್ಛಿಕ ವಿಷಯಗಳಲ್ಲಿ ಒಂದಾಗಿರುವಂತೆ ಸಂಬಂಧಪಟ್ಟ ಭಾಷೆಯೊಂದಿಗಿನ ಕಲಾ ವಿಭಾಗದ ಪದವಿಯಾಗಿರಬೇಕು. ಪ್ರಶ್ನಿತ ನಿಯಮಗಳಡಿಯಲ್ಲಿ, ಆರ್‌ಐಇಎಸ್‌ಐಯಿಂದ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆಯುವಂಥ ಅಭ್ಯರ್ಥಿಯು ಪರಿಗಣನೆಗಾಗಿ ಅರ್ಹರಾಗಿರತಕ್ಕವನಾಗಿರುತ್ತಾನೆ. ಪ್ರಶ್ನಿತ ನಿಯಮಗಳು, 2002ರಲ್ಲಿ ಉಪಬಂಧಿಸಿರುವ ಸಡಿಲಿಕೆಯು, ಎನ್‌ಸಿಟಿಇ ಯಿಂದ ಗೊತ್ತುಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಗೆ ವಿರುದ್ಧವಾಗಿ ಸಾಗುತ್ತದೆ. ರಾಜ್ಯ ಸರ್ಕಾರವು ಉದ್ಯೋಗದಾತನಾಗಿ, ಎನ್‌ಸಿಟಿಇಯು ಗೊತ್ತುಪಡಿಸಿರುವ ವಿದ್ಯಾರ್ಹತೆಯನ್ನು ದುರ್ಬಲಗೊಳಿಸಲು ಅಪೇಕ್ಷಿಸಿದಲ್ಲಿ, 2001ರ ವಿನಿಯಮಗಳ 5ನೇ ವಿನಿಯಮನವನ್ನು ಆಧಾರವಾಗಿಟ್ಟುಕೊಂಡು ಸಡಿಲಿಕೆ ಕೋರುವುದನ್ನು ಮಾಡಲೇ ಬೇಕಾಗುತ್ತದೆ. ಎನ್‌ಸಿಟಿಇ ಯಿಂದ ಯಾವುದೇ ಸಡಿಲಿಕೆಯನ್ನು ಪಡೆದಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಅಧಿಸೂಚನೆಯು ಮುಖ್ಯವಾಗಿರುತ್ತದೆ. ಈ ಸಂಬಂಧದಲ್ಲಿ ಎನ್‌ಸಿಟಿಇ ಯಿಂದ ಪೂರ್ವಾನುಮೋದನೆ / ಸಡಿಲಿಕೆ ಪಡೆಯಲಾಗಿದೆಯೆಂದು ಸಾಬೀತು ಪಡಿಸಲು ಪ್ರತ್ಯರ್ಜಿದಾರ/ರಾಜ್ಯವು ಈ ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಆದ್ದರಿಂದ, ಇಂಗ್ಲೀಷ್ ಭಾಷಾ ಸಹಶಿಕ್ಷಕನಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಮಾಡಿರುವ ನಿಯಮಗಳ ತಿದ್ದುಪಡಿಯು, ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ. ನ್ಯಾಯಾಧಿಕರಣವು, ವಿಷಯವನ್ನು ಈ ಆಯಾಮದೊಂದಿಗೆ ವ್ಯವಹರಿಸುವಾಗ, ಕನಿಷ್ಠ ವಿದ್ಯಾರ್ಹತೆಗಳನ್ನು ವಿಧಿಸುವಂಥ ಎನ್‌ಸಿಟಿಇ ವಿನಿಯಮನಗಳೂ ಕೂಡ ಸಮಾನ ವಿದ್ಯಾರ್ಹತೆಯನ್ನು ನಿಗದಿಪಡಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಸ್ವಾತಂತ್ರವನ್ನು ನೀಡುತ್ತವೆಂದು ಹಾಗೂ ಪ್ರಶ್ನಿತ ತಿದ್ದುಪಡಿಯು, ಎನ್‌ಸಿಟಿಇ ವಿನಿಯಮನಗಳಡಿಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಗಳನ್ನು ಮಾರ್ಪಾಡು ಮಾಡುವಂತಿಲ್ಲವೆಂದು ಸ್ವತಃ ಅಭಿಪ್ರಾಯ ಪಡುವ ಮೂಲಕ ತಪ್ಪು ನಿರ್ದೇಶನ ಮಾಡಿರುತ್ತದೆ. ನ್ಯಾಯಾಧಿಕರಣದ ಈ ತೀರ್ಪು ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ ವ್ಯತಿರಿಕ್ತವಾಗಿರುತ್ತದೆ. ಸೆಕೆಂಡರಿ / ಪ್ರೌಢ ಶಾಲಾ ಶಿಕ್ಷಕರಿಗೆ ಸಂಬಂಧಿಸಿದ ಕನಿಷ್ಠ ವಿದ್ಯಾರ್ಹತೆಯು, ಬಿ.ಎಡ್.,

ಅಥವಾ ತತ್ಸಮಾನ ಪದವಿಯಾಗಿರಬೇಕು. ಪ್ರಸ್ತುತ ಪ್ರಕರಣದಲ್ಲಿ, ಶಿಕ್ಷಕರನ್ನು ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ನೇಮಕ ಮಾಡಿಕೊಳ್ಳಬೇಕೆಂದು ಕೋರಲಾಗಿರುತ್ತದೆ. ಪ್ರಶ್ನಿತ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರವು, ಪ್ರಸ್ತುತ ಪ್ರಕರಣದಲ್ಲಿ ಸಂಬಂಧಪಟ್ಟ ಭಾಷೆಯನ್ನು ಅಂದರೆ ಇಂಗ್ಲಿಷ್ ಭಾಷೆಯನ್ನು ಪದವಿ ಮಟ್ಟದಲ್ಲಿ ಒಂದು ಐಚ್ಛಿಕ ಭಾಷೆಯನ್ನಾಗಿ ಅಧ್ಯಯನ ಮಾಡಿರದಂಥ ಅಭ್ಯರ್ಥಿಗಳಿಗೆ ಬಡ್ತಿ ನೀಡುವುದಕ್ಕೆ ಷರತ್ತನ್ನು ಏಕಪಕ್ಷೀಯವಾಗಿ ಸಡಿಲಗೊಳಿಸಿರುತ್ತದೆ. ಇದರ ಅರ್ಥ, ಅವರ ಪದವಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಅಭ್ಯಸಿಸದ ಪದವಿಧರರು ಮತ್ತು ಆರ್‌ಐಇಎಸ್‌ಐ ಯಿಂದ ಡಿಪ್ಲೊಮೊ ಪಡೆದಿರುವವರನ್ನು ಇಂಗ್ಲಿಷ್ ಬೋಧಿಸಲು ಇಂಗ್ಲಿಷ್ ಸಹಶಿಕ್ಷಕನಾಗಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ. ಆರ್‌ಐಇಎಸ್‌ಐ ತನ್ನ 21.04.2011ರ ಪತ್ರದಲ್ಲಿ, ನಿರಪೇಕ್ಷವಾಗಿ, ಪಿಜಿಡಿಇ ಯು ವಿಶ್ವವಿದ್ಯಾಲಯವು ನೀಡುವ ಪದವಿಗೆ ಸಮಾನವಾಗಿರುವುದಿಲ್ಲವೆಂದು ಹೇಳಿರುತ್ತದೆ. ಆದಾಗ್ಯೂ, ತಿದ್ದುಪಡಿ ನಿಯಮಗಳನ್ನು ಅನ್ವಯಿಸಿಕೊಳ್ಳುವ ಮೂಲಕ, ಯಾವುದೇ ಶಿಸ್ತಿನ ಕಲಾವಿಭಾಗದಲ್ಲಿ ಪದವಿ ಪಡೆದಿರುವಂಥ ಅಭ್ಯರ್ಥಿಯು, ಇಂಗ್ಲೀಷ್‌ನಲ್ಲಿನ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆಯುವುದರೊಂದಿಗೆ ಇಂಗ್ಲಿಷ್ ಭಾಷಾ ಸಹ ಶಿಕ್ಷಕನ ಹುದ್ದೆಗೆ ಪರಿಗಣಿಸಲು ಅರ್ಹನಾಗಿರುತ್ತಾನೆ. ಈ ತರ್ಕವನ್ನು ವಿಸ್ತರಿಸುವುದಾದಲ್ಲಿ, ದೈಹಿಕ ಶಿಕ್ಷಣ ತರಬೇತಿಯಲ್ಲಿ ಪದವಿಯನ್ನು ಪಡೆದಿರುವಂಥ ಅಭ್ಯರ್ಥಿಯು, ಇಂಗ್ಲೀಷ್ ಡಿಪ್ಲೊಮೊ ಪ್ರಮಾಣಪತ್ರವನ್ನು ಪಡೆದುಕೊಂಡರೆ ಇಂಗ್ಲಿಷ್ ಭಾಷಾ ಸಹಶಿಕ್ಷಕನಾಗಿ ನೇಮಕವಾಗುವುದಕ್ಕೆ ಸಂಬಂಧಿಸಿದಂತೆ ಅರ್ಹನಾಗಿರುತ್ತಾನೆ. ಇದು, ಅಸಂಬದ್ಧವಾಗಿರುತ್ತದೆ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಉದ್ದೇಶ, ಜ್ಞಾನದ ಪ್ರಾಮುಖ್ಯತೆಯು ಫಲಪ್ರದವಾಗಿರಬೇಕೆಂಬುದನ್ನು ಖಚಿತಪಡಿಸಿಕೊಳ್ಳುವುದೇ ಆಗಿರುತ್ತದೆ. ಪದವಿ ಮಟ್ಟದಲ್ಲಿ ಒಂದು ನಿರ್ದಿಷ್ಟ ವಿಷಯವನ್ನು, ಅಭ್ಯಾಸ ಮಾಡಿರುವಂಥ ಅಭ್ಯರ್ಥಿಗಳನ್ನು, ಅದೇ ವಿಷಯದ ಬೋಧನೆಗೆ ನೇಮಕ ಮಾಡಿಕೊಂಡಾಗ ಮಾತ್ರ ಮೂಲ ಉದ್ದೇಶದ ಸಾರ್ಥಕವಾಗುತ್ತದೆ. ಪ್ರಶ್ನಿತ ಅಧಿಸೂಚನೆಯು ತರ್ಕವನ್ನು ಶೋಧಿಸುತ್ತದೆ. ನಾವು, ***ರನು ಹಜಾರಿಕ ಮತ್ತು ಇತರರು –ವಿರುದ್ಧ– ಅಸ್ಸಾಂ ರಾಜ್ಯ ಮತ್ತು ಇತರರು***[1], ಪ್ರಕರಣದಲ್ಲಿ

1. (2011) 4 ಎಸ್‌ಸಿಸಿ 798

ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿಸುವುದು ಉಪಯುಕ್ತವಾಗಬಹುದು, ಇದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಒಬ್ಬ ವ್ಯಕ್ತಿ ಶಿಕ್ಷಕ ವೃತ್ತಿಯನ್ನು ನಿಭಾಯಿಸಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಎನ್‌ಸಿಟಿಇ ಯ ಅಧಿಕಾರವನ್ನು ನಿರೂಪಿಸಿ, ಮಾನ್ಯ ಮಾಡಿರುತ್ತದೆ.

12. ಆದ್ದರಿಂದ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, 2002ರ ನಿಯಮಗಳ ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ. ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ಆದೇಶವು ರದ್ದುಪಡಿಸಲು ತಕ್ಕುದಾಗಿರುತ್ತದೆ. ಪರಿಣಾಮವಾಗಿ, ಈ ಮುಂದಿನಂತೆ ತೀರ್ಪು ನೀಡಿರುತ್ತೇವೆ.

(i) ಈ ಅಪೀಲನ್ನು ಅಂಗೀಕರಿಸಿದೆ.

(i) ಸಂ.1437 ರಿಂದ 1442/2010ರ ವರೆಗಿನ ಅರ್ಜಿಗಳಲ್ಲಿ ಹೊರಡಿಸಿರುವ 03.12.2010ರ ಆದೇಶವನ್ನು ವಜಾಪಡಿಸಲಾಗಿರುತ್ತದೆ.

(iii) ಅಧಿಸೂಚನೆ ಸಂಖ್ಯೆ ಡಿಪಿಎಆರ್ 59 ಎಸ್‌ಆರ್‌ಇ 2002, ಬೆಂಗಳೂರು, ದಿನಾಂಕ 24.06.2003ರ ಪ್ರಶ್ನಿತ ಅಧಿಸೂಚನೆಯನ್ನು ರದ್ದುಪಡಿಸಲಾಗಿರುತ್ತದೆ.

(iv) ಪ್ರತ್ಯರ್ಜಿದಾರ / ರಾಜ್ಯಕ್ಕೆ, ಸಾಧ್ಯವಾದಷ್ಟು ಕ್ಷಿಪ್ರವಾಗಿ ಮತ್ತು ಯಾವುದೇ ಕಾರಣಕ್ಕೂ, ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳಿಗಿಂತ ಕಡಿಮೆ ಇಲ್ಲದಂತೆ ಜೇಷ್ಠತಾ ಪಟ್ಟಿಯನ್ನು ಹಿಂದಕ್ಕೆ ಪಡೆಯಲು ನಿರ್ದೇಶಿಸಲಾಗಿರುತ್ತದೆ. ತದನುಸಾರವಾಗಿ ಆದೇಶಿಸಿದ್ದು, ಯಾವುದೇ ವೆಚ್ಚಗಳಿರುವುದಿಲ್ಲ.